# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## **ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 31-03-2021 ಪ್ರಶ್ನೆ ಸಂಖ್ಯೆ : 3036 (2504+2496+2475)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು)

ಉತ್ತರ ನೀಡಬೇಕಾದ ದಿನಾಂಕ : 31-03-2021

ಉತ್ತರಿಸುವ ಸಚಿವರು: ಕಂದಾಯ ಸಚಿವರು

ವಿಷಯ : ತುಮಕೂರು ತಾಲ್ಲೂಕು ಕೋರ ಹೊಸಹಳ್ಳಿ ಸರ್ವೆ ನಂ. 79/1 ಬಗ್ಗೆ

(ಅ) ತುಮಕೂರು ತಾಲ್ಲೂಕು ಕೋರ ಹೊಸಹಳ್ಳಿ ಸರ್ವೆ ನಂ.79/1 ಜಮೀನಿನ ಅಳತೆ ಮಾಡಲು ಪಹಣಿಯಲ್ಲಿ 3-9 ಕಾಲಂ ಸರಿಪಡಿಸುವ ಬಗ್ಗೆ ತುಮಕೂರು ಉಪ ವಿಭಾಗ ಅಧಿಕಾರಿಗಳ ನ್ಯಾಯಾಲಯದ ಆದೇಶವಾಗಿದ್ದು, ಸದರಿ ಆದೇಶದ ಮೇರೆಗೆ ಇದುವರೆವಿಗೂ ಯಾವುದೇ ಕ್ರಮ ಕೈಗೊಂಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಸರ್ಕಾರ ಯಾವ ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ;

(ಇ) ತಾಲ್ಲೂಕು ಸರ್ವೆಯವರಿಂದ ಸರ್ವೆ ನಕ್ಷೆ ಮತ್ತು ವರದಿ ಪಡೆದು ಖಾತೆದಾರರ ಹೇಳಿಕೆ ಪಡೆದು ಪಹಣಿಯ 3 ಮತ್ತು 9 ಖರಾಬು ಕಡಿಮೆ ಮಾಡಿ ಪಹಣಿಯಲ್ಲಿ ಕಾಲಂ 3 ಮತ್ತು 9ಕ್ಕೆ ತಾಳೆ ಮಾಡಲು ತಹಶೀಲ್ದಾರರವರು ನಿರ್ದೇಶಿಸಿದ್ದರೂ ಸಹ ಬಹಳ ವರ್ಷಗಳಿಂದ ಜಮೀನಿನ ಅಕ್ಕಪಕ್ಕದಲ್ಲಿ ಜನ ಸಾಮಾನ್ಯರು ಓಡಾಡಲು ದಾರಿಯಿಲ್ಲದೆ ತುಂಬ ತೊಂದರೆಯಾಗಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ ; (ವಿವರ ನೀಡುವುದು)

(ಈ) ಸದರಿ ಸರ್ವೆ ಕೆಲಸವನ್ನು ಯಾವ ಕಾಲಮಿತಿಯೊಳಗೆ ಸರಿಪಡಿಸಲಾಗುವುದು ? (ಸಂಪೂರ್ಣ ವಿವರ ನೀಡುವುದು)